## ಸೂಕ್ತಿಪ್ರಭ

**ಕ್ರಿಯೆಗಳ** ಹಿಂದೆ ಇರುವ ಉದ್ದೇಶಗಳನ್ನು ನೋಡಿ ದೇವರು ಮನುಷ್ಯನನ್ನು ಕುರಿತು ನಿರ್ಣಯಕ್ಕೆ ಬರುತ್ತಾನೆ. ಪ್ರಾಪಂಚಿಕ ವ್ಯಕ್ತಿಗಳು ಮನುಷ್ಯನ ಕ್ರಿಯೆಗಳ ಹೊರಗಿನ ಅಂಶಗಳನ್ನು ಮಾತ್ರ ಕಾಣಬಲ್ಲರು. —ಸ್ವಾಮಿ ಶಿವಾನಂದ

**ನೈಜ** ಪ್ರೀತಿಯಿದ್ದಾಗ ಹೃದಯದಿಂದ ಮೆಚ್ಚುಗೆ ಹೊರಸೂಸುತ್ತದೆ. ಕೇವಲ ಮೆಚ್ಚುಗೆಯಾದರೋ ಮನಸ್ಸಿನಿಂದ ಪ್ರೀತಿಸುವುದಾಗಿದೆ. —ಟಿ. ಗೌಟಿಯರ್

**ಜನಸಾಮಾನ್ಯರ** ಅಭಿಪ್ರಾಯಕ್ಕೆ ವಿರುದ್ಧವಾದ ನಿಯಮಗಳು ಅರಾಜಕತೆ ಹಾಗೂ ಅನೀತಿಗೆ ದಾರಿಮಾಡಿಕೊಡುತ್ತವೆ. —ಶ್ರೀ ಅರವಿಂದರು

**ಸಂಪತ್ತು** ಎಂಬುದು ಸಮುದ್ರದ ನೀರಿನಂತೆ. ಕುಡಿದಷ್ಟೂ ಬಾಯಾರಿಕೆ ಹೆಚ್ಚುತ್ತದೆ. ಕೀರ್ತಿಯೂ ಹೀಗೆಯೇ. ಗಳಿಸಿದಷ್ಟೂ ಅತೃಪ್ತಿಯೇ ಕಾಡುತ್ತದೆ. —ಶೋಪನ್‌ಹೋವರ್

**ಯೌವನದಲ್ಲಿ** ಭವಿಷ್ಯದ ಕನಸುಗಳಿರುತ್ತವೆ. ವೃದ್ಧಾಪ್ಯದಲ್ಲಿ ಆಗಿಹೋದ ದಿನಗಳ ಮೆಲುಕು ಇರುತ್ತದೆ. ಮಧ್ಯವಯಸ್ಸಿನಲ್ಲಿ ಎತ್ತ ನೋಡಲೂ ಸಮಯವಿಲ್ಲದಷ್ಟು ಕಾರ್ಯನಿರತರಾಗಿರುತ್ತೇವೆ. —ಅನಾಮಿಕ

**ಸಾಕ್ಷರತೆಯೇ** ಶಿಕ್ಷಣವೆಂದೂ, ಆಧುನಿಕತೆಯೇ ನಾಗರಿಕತೆಯೆಂದೂ ತಪ್ಪಾಗಿ ತಿಳಿಯಬೇಡಿ. —ಫೀಲ್ಡ್ ಮಾರ್ಷಲ್ ಕಾರಿಯಪ್ಪ

**ತಪ್ಪಾಗಬಹುದು** ಎಂದು ಸದಾ ಹೆದರುತ್ತಿರುವುದೇ ಜೀವನದಲ್ಲಿ ನಾವು ಮಾಡಬಹುದಾದ ಅತಿ ದೊಡ್ಡ ತಪ್ಪು. —ಅನಾಮಿಕ

**ಮುಖಂಡನಾಗುವವನಿಗೆ** ಘೇಂಡಾಮೃಗದ ಚರ್ಮವಿರಬೇಕು, ತಾಯಿಯ ವಾತ್ಸಲ್ಯವಿರಬೇಕು, ಸೈನಿಕನ ಧೈರ್ಯವಿರಬೇಕು, ಸಂತನ ತಾಳ್ಮೆಯಿರಬೇಕು. —ಅನಾಮಿಕ

**ತಮ್ಮಲ್ಲೇ** ಶಾಂತಿಯಿಲ್ಲದೆ ವಿಶ್ವಶಾಂತಿಗಾಗಿ ಪ್ರಯತ್ನಿಸುತ್ತಿರುವ ಅನೇಕರು ಇಂದು ಕಂಡುಬರುತ್ತಾರೆ. —ಸ್ವಾಮಿ ಶಿವಾನಂದ

**ಯಾವಾಗ** ಮೌನವಾಗಿರಬೇಕು ಎಂದು ತಿಳಿಯದವರು, ಯಾವಾಗ ಮಾತನಾಡಬೇಕು ಎಂಬುದನ್ನೂ ಅರಿಯರು. —ಸ್ವಾಮಿ ನಿರ್ಮಲಾನಂದ

**ಪ್ರತಿಭೆಯನ್ನು** ದೇವರ ಕೃಪೆಯಿಂದ ಪಡೆಯುತ್ತೇವೆ ಎಂದು ತಿಳಿದು ವಿನಯವಂತರಾಗಿ. ಕೀರ್ತಿ ಮನುಷ್ಯನಿಂದ ಲಭಿಸುತ್ತದೆ ಎಂದು ತಿಳಿದು ಕೃತಜ್ಞತೆಯುಳ್ಳವರಾಗಿ. ಗರ್ವವು ಅಹಂಕಾರದಿಂದ ಹುಟ್ಟುತ್ತದೆ ಎಂದು ಅರಿತು ಜಾಗೃತರಾಗಿ. —ಅನಾಮಿಕ

**ಬೀಳದೇ** ಇರುವುದರಲ್ಲಿ ದೊಡ್ಡಸ್ತಿಕೆಯಿಲ್ಲ. ಪ್ರತಿ ಬಾರಿ ಬಿದ್ದಾಗಲೂ ಮತ್ತೆ ಎದ್ದು ನಿಲ್ಲುವ ಪ್ರಯತ್ನದಲ್ಲೇ ನಮ್ಮ ಉತ್ತಮಿಕೆ ಇರುವುದು. —ಅನಾಮಿಕ

**ಅನುಕಂಪದ** ಭಾಷೆಯನ್ನು ಕಿವುಡರು ಕೇಳಬಲ್ಲರು, ಕುರುಡರು ಓದಬಲ್ಲರು. —ಮಾರ್ಕ್ ಟ್ವೈನ್

## ಪ್ರಾರ್ಥನೆ

### ಶ್ರೀಮಾತೆ ಶಾರದಾದೇವಿ

ಜಗದ ತಮ ತೊಡೆಯಲು ನೀ ಧರೆಗೆ ಬಂದೆ
ಗುರುದೇವನಡಿಯಲ್ಲಿ ಸತಿಯಾಗಿ ನಿಂದೆ
ಸಕಲ ಜೀವಕೆ ತಾಯಿ ನಾನೆಂದೆ
ಎನಿತು ಪಾಪಗಳನ್ನು ತೊಳೆವೆನೆಂದೆ ॥೧॥

ಈ ಜಗದ ಒಡಲೊಳಗೆ ಬಲು ಬಳಲಿ ಬೆಂದೆ
ಸಂಸಾರ ಬಂಧನದಿ ನಿಂದು ನೊಂದೆ
ಬಡತನದ ಬೇಗೆಯಲಿ ಬೆಂದು ಬೆಂಡಾದೆ
ನಿಂದನೆಯ ಸುರಿಮಳೆಯ ನೀ ತಾಳಿಕೊಂಡೆ ॥೨॥

ಎನಿತು ಕರುಣೆಯೆ ತಾಯಿ ನಿನ್ನ ಮಕ್ಕಳ ಮೇಲೆ
ಅಕ್ಕರೆಯ ಸಿರಿಕಡಲು ನಿನ್ನೊಡಲು ತಾಯೆ
ಬಳಿಗೆ ಬಂದವರನ್ನು ನೀನೆತ್ತಿಕೊಂಡೆ
ಸಕಲ ಪಾಪಗಳನ್ನು ನೀ ಹೀರಿಕೊಂಡೆ ॥೩॥

ನೀ ಶಕ್ತಿ ನೀ ಮುಕ್ತಿ ನೀ ಕಾಳಿಯಮ್ಮ
ನೀನಾದಿ ನೀನಂತ್ಯ ನೀನೆ ಲಯವಮ್ಮ
ನಿನ್ನಿಚ್ಛೆಯಂದದಲಿ ಈ ಜಗದ ಆಟ
ಸಕಲ ಜೀವಿಗಳ ಈ ತೊಳಲುವಾಟ ॥೪॥

ನಿನ್ನನರಿಯುವಂಥ ಬಲವಿಹುದೆ ನಮಗೆ?
ಅಡಿಯಲ್ಲಿ ಮುಡಿಯಿಡುವ ಬಗೆಯೊಂದೆ ನಮಗೆ
ನೀ ಸಲಹು ಕೈಹಿಡಿದು ಕೊನೆಗಾಣುವನಕ
ನಿನ್ನೊಳಗೆ ನಾ ನಿಂದು ಲಯವಾಗುವನಕ ॥೫॥

–ಡಿ.ಕೆ. ಈರೇಗೌಡ